ಕರ್ನಾಟಕದ ವಿದ್ಯುತ್ ಮಂಡಲಿಯಂ ಸದಸ್ಯರ ಬಗ್ಗೆ.

೧೭೭೮ (ಡಿ). ಶ್ರೀ ಗೋಪಾಲ ಮುಕಂದ ಕಾನಡೆ (ಸಿರ್ಸಿ).—ಮಾನ್ಯ ವಾಣಿಜ್ಯ, ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇರುವ ಸದಸ್ಯರ ಸಂಖ್ಯೆ ಎಷ್ಟು ?

(ಆ) ಈ ಮಂಡಳಿಯಲ್ಲಿರುವ ಪರಿಶಿಷ್ಟ ಜಾತಿಯ ಸದಸ್ಯರ ಸಂಖ್ಯೆ ಎಷ್ಟು ?

(ಇ) ಕಳೆದ ನಾಲ್ಕು ವರ್ಷದಿಂದ ಈ ಮಂಡಳಿಯಲ್ಲಿ ಸದಸ್ಯರ ಪೈಕಿ ಪರಿಶಿಷ್ಟ ಜಾತಿಯವರನ್ನು ಸೇರಿಸದೇ ಇರಲು ಕಾರಣವೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ಮಂಡಳಿಯಲ್ಲಿರುವ ಸದಸ್ಯರ ಸಂಖ್ಯೆ—೭

(ಆ) ಒಂದು.

(ಇ) ೧೯೮೬ರ ಮಾರ್ಚಿನಿಂದ ಪರಿಶಿಷ್ಟ ಜಾತಿಗೆ ಸೇರಿದ ಒಬ್ಬರು ಸದಸ್ಯರು ಇದ್ದಾರೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಉತ್ಪಾದನೆಯ ಬಗೆಗೆ.

೧೭೮೩. ಶ್ರೀ ಕೆ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದ ಮಾಲಿಕತ್ವದ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಕಾರ್ಖಾನೆಯ ವಿಸ್ತರಣಾ ಕಾರ್ಯಕ್ಕಾಗಿ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು ?

ಆ) ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಕಾರ್ಖಾನೆಯ ಸಾಬೂನು ಉತ್ಪಾದನಾ ಸಾಮರ್ಥ್ಯ ಎಷ್ಟು ?

ಇ) ಪ್ರಸಕ್ತ ಉತ್ಪಾದಿಸುತ್ತಿರುವ ಸಾಬೂನಿನ ಪ್ರಮಾಣ ಎಷ್ಟು ?

ಈ) ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಕಾರ್ಖಾನೆಯು ಉತ್ಪಾದನೆಯಲ್ಲಿ ಉಪಯೋಗಿಸಿಕೊಳ್ಳಲಾರದೆಯೆ ಕಚ್ಚಾಮಾಲನ್ನು ಮಾರಿದೆಯೇ ? (ಪ್ರತಿ ವಸ್ತುವಿನ ವಿವರಗಳು ಮತ್ತು ಪ್ರಮಾಣ)

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ವಿಸ್ತರಣಾ ಕಾರ್ಯಕ್ಕಾಗಿ ರಾಜ್ಯ ಸರ್ಕಾರ ಖರ್ಚು ಮಾಡಿಲ್ಲ.

ಆ) ೫೬,೦೦೦ ಮೆಟ್ರಿಕ್ ಟನ್‌ಗಳು.

ಇ) ೧೨,೦೦೦ ಮೆಟ್ರಿಕ್ ಟನ್‌ಗಳು.

ಈ) ಸಾರ್ವಜನಿಕ ಉದ್ದಿಮೆಗಳ ಸಮಿತಿಯು ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದೆ. ಆದುದರಿಂದ ಈ ಬಗ್ಗೆ ವ್ಯಾಖ್ಯಾನ ನೀಡುವುದು ಸಮಂಜಸವಲ್ಲ.